ಶ್ರೀ ಬಿ. ಸಿ. ನಂಜುಂಡಯ್ಯ.—ಈ ಆಸ್ಪತ್ರೆಗಳಲ್ಲಿ ರೋಗಿಗಳ ಮೇಲೆ ಹಾಸಿತಕ್ಕ ತುಲ್ಕವನ್ನು ಹೆಚ್ಚಿಸತಕ್ಕ ಒಗ್ಗೆ ಒಂದು ಸಮಿತಿಯನ್ನು ಮಾಡಿ ಅವರ ಅಭಿಪ್ರಾಯವನ್ನು ತಾವು ಪಡೆದುಕೊಂಡಿರಲ್ಲಿಲ್ಲವೇ ?

Mr. SPEAKER.—That was answered last week.

ಶ್ರೀ ಬಿ. ಸಿ. ನಂಜುಂಡಯ್ಯ.—ಆ ಸಮಿತಿಯಲ್ಲಿ ಕೇವಲ ಔಷಧಿ ಕೊಡತಕ್ಕವರಿದ್ದು, ಔಷಧಿ ತೆಗೆದುಕೊಳ್ಳತಕ್ಕವರ ಪರವಾಗಿ ಯಾರೂ ಇರುವುದಿಲ್ಲವಲ್ಲವೇ ?

Mr. SPEAKER.—That was also answered.

ಶ್ರೀ ಬಿ. ಸಿ. ನಂಜುಂಡಯ್ಯ.—ತಾವು ಪುನಃ ಈ ಮಾರ್ಚಿ 3ನೆಯ ತಾರೀಖಿನಲ್ಲಿ ರಿವೈಸ್ ಮಾಡಿದ ಆರ್ಡರಿನ ಬಗ್ಗೆ ಆ ಸಮಿತಿ ಅಭಿಪ್ರಾಯವನ್ನು ತಾವು ಪಡೆದಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

9 A.M.

ಶ್ರೀ ಬಿ. ಸಿ. ನಂಜುಂಡಯ್ಯ.—17ನೆಯ ಪುಟದಲ್ಲಿ ಕೊಟ್ಟಿರುವ ಪಟ್ಟಿಯ ಪ್ರಕಾರ ಬೆಂಗಳೂರು ಮತ್ತು ಮೈಸೂರು ಸಿಟಿಗಳಲ್ಲಿರುವ ಆಸ್ಪತ್ರೆಗಳಲ್ಲಿ ದರಗಳು ಜಾಸ್ತಿಯಾದ ಮೇಲೆ ಉತ್ಪತ್ತಿ ಜಾಸ್ತಿಯಾಗಿಲ್ಲವೆಂದು ಕಾಣುತ್ತದೆ. ಹಾಗಾದರೆ ರೋಗಿಗಳು ಮೊದಲಿನಷ್ಟು ಹೋಗಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಕಡಮೆಯಾಗಿರಬಹುದು. ಆ ಪಟ್ಟಿಯನ್ನು ನೋಡಿದರೆ ಕೆಲವು ಕಡೆ ಹೆಚ್ಚಿಗೆ ಬಂದಿದೆ, ಕೆಲವು ಕಡೆ ಕಡಮೆ ಬಂದಿದೆಯೆಂದು ಗೊತ್ತಾಗುತ್ತದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಬೆಂಗಳೂರು, ಮೈಸೂರು ಸಿಟಿಗಳ ಆಸ್ಪತ್ರೆಗಳ ವಿಚಾರ ನಾನು ಹೇಳುತ್ತಿದ್ದೇನೆ. ಇಲ್ಲಿ ಒಂದು ಆಸ್ಪತ್ರೆ ವಿನಾಯಿಸಿ ಮಿಕ್ಕೆಲ್ಲ ಆಸ್ಪತ್ರೆಗಳಲ್ಲಿಯೂ ಕಡಮೆಯಾಗಿದೆಯಲ್ಲವೇ ?

Mr. SPEAKER.—The figures speak for themselves.

ಶ್ರೀ ಬಿ. ಸಿ. ನಂಜುಂಡಯ್ಯ.—ದರಗಳು ಜಾಸ್ತಿ ಮಾಡುವುದಕ್ಕೆ ಮುಂಚೆ ಪ್ರತಿಯೊಬ್ಬರಿಂದಲೂ ಒಂದಾಣೆ ತೆಗೆದುಕೊಳ್ಳುತ್ತಿದ್ದುದನ್ನೂ ಈಗ ನಿಲ್ಲಿಸಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ಹಿಂದೆ ಮೈಸೂರು ಬೆಂಗಳೂರು ಸಿಟಿಗಳಲ್ಲಿ out-patients ಹತ್ತಿರ ಚಾರ್ಜ್ ತೆಗೆದುಕೊಳ್ಳುತ್ತಿದ್ದರು. ಈಚೆಗೆ 3-3-51ರ ಸರ್ಕಾರಿ ಹುಕುಮಿನ ಪ್ರಕಾರ ಅದನ್ನು ನಿಲ್ಲಿಸಿದ್ದಾರೆ.

ಶ್ರೀ ಬಿ. ಸಿ. ನಂಜುಂಡಯ್ಯ.—ತಾವು ನವಂಬರಿನಲ್ಲಿ ದರಗಳನ್ನು ಜಾಸ್ತಿಮಾಡುವುದಕ್ಕೆ ಮುಂಚೆ ಒಂದಾಣೆಯನ್ನು ರೋಗಿಗಳಿಂದ ತೆಗೆದು ಕೊಳ್ಳುತ್ತಿದ್ದರಲ್ಲ, ಈಗ ಅದನ್ನೂ ನಿಲ್ಲಿಸಿದ್ದಾರೆಯೇ ?

Sri T. CHANNIAH.—Government have passed orders abolishing the levy of fees.

ಶ್ರೀ ವಿ. ವೆಂಕಟಪ್ಪ.—17ನೆಯ ಪುಟದಲ್ಲಿ, ಕೊಟ್ಟಿರುವ ಪಟ್ಟಿಯಲ್ಲಿ General Hospital and L. F. Dispensaries in Tumkur District ಎಂಬುದಕ್ಕೆ ಸಂಬಂಧಪಟ್ಟಂತೆ ಜನವರಿ ತಿಂಗಳಿನಲ್ಲಿ 1061 ರೂಪಾಯಿಗಳ ಉತ್ಪತ್ತಿಯೆಂದೂ, ಫೆಬ್ರುವರಿ ತಿಂಗಳಿಗೆ 11,638 ರೂಪಾಯಿಗಳ ಉತ್ಪತ್ತಿಯೆಂದೂ ಹೇಳಿದ್ದೀರಿ. ಇದು ಸರಿಯೇ ?

ಶ್ರೀ ಟಿ. ಚನ್ನಯ್ಯ.—"Printer's Devil" ಇರಬಹುದು.

Chintamani Municipality.

Q.—625. Sri M. C. **ANJANEYA REDDY** (Chintamani).—

Will the Government be pleased to state :—

(*a*) whether it has come to their notice that the Chintamani Municipality have decided to form sites to be disposed of by public auction of the vacant lands lying between the compound of the Local Fund Dispensary and M. G. Road in the North and Bangalore Road in the East;

(*b*) whether these lands on which buildings are to be built belong to the Municipality or to the Public Works Department; and if it belongs to the former, the number of feet of space on the road side that has to be left for the Public Works Department ?

A.—Sri T. CHANNIAH (Minister for Public Health and Local Self-Government).—

(*a*) The Municipal Council, Chintamani, decided in 1949-50 to form sites in front of the Local Fund Dispensary and to dispose them off in public auction and to earmark the amount realised from the sites for the construction of the combined Hospital at Chintamani.

(*b*) The ownership of the land is in dispute. This will be examined and a final decision arrived at.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಮರಾಮತ್ತು ಇರಾಖೆಯವರಿಗೆ ರಸ್ತೆಯ ಪಕ್ಕದಲ್ಲಿ ಮೂರು ಅಡಿ ಸೇರುತ್ತದೆಂದು ಹೇಳಿದ್ದೀರಿ. ಹಾಗಿದ್ದ ಮೇಲೆ ಈ ಪ್ರದೇಶ ಮರಾಮತ್ತು ಇರಾಖೆಯವರಿಗೆ ಸೇರಿದ್ದೆಂದು ಏಕೆ ಉತ್ತರದಲ್ಲಿ ಹೇಳಿಲ್ಲ.

ಶ್ರೀ ಟಿ. ಚನ್ನಯ್ಯ.—ಮರಾಮತ್ತು ಇರಾಖೆಯವರಿಗೆ ಸೇರಿದೆಯೇ ಅಥವಾ ಮುನಿಸಿಪಾಲಟಿಯವರಿಗೆ ಸೇರಿದೆಯೇ ಎಂಬುದು dispute ನಲ್ಲಿದೆ. ಅದಿನ್ನೂ ತೀರ್ಮಾನವಾಗಿಲ್ಲದಿರುವುದರಿಂದ ಉತ್ತರ ಕೊಟ್ಟಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಟೌನಿನಲ್ಲಿ ಮರಾಮತ್ತು ಇಲಾಖೆಯವರ ರಸ್ತೆಯಿದ್ದರೆ, ಆ ರಸ್ತೆಯ ಅಂಚಿನವರೆಗೂ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶವಿದೆಯೆ ?

ಶ್ರೀ ಟಿ. ಚನ್ನಯ್ಯ.—ಅದಿನ್ನೂ disputeನಲ್ಲಿದೆ. ಸಾಮಾನ್ಯವಾಗಿ ರಸ್ತೆಯ ಅಂಚಿನಿಂದ 20 ಅಡಿ ಬಿಟ್ಟು ಕಟ್ಟಿಕೊಳ್ಳಬೇಕು ಎಂದು ಹೇಳಿದೆ. special case ಗಳಲ್ಲಿ 10 ಅಡಿ ಬಿಟ್ಟು ಕಟ್ಟಿಕೊಳ್ಳುವುದಕ್ಕೆ ಅವಕಾಶ ವಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಆ ರೀತಿ ಹತ್ತಡಿಯನ್ನು ಕೂಡ ರಸ್ತೆಯ ಪಕ್ಕದಲ್ಲಿ ಬಿಡದೆ ಸ್ವೆಟುಗಳನ್ನು ಕೊಟ್ಟು ಕಟ್ಟಡ ಕಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—(a)ಗೆ ಉತ್ತರದಲ್ಲಿ, ಈ ಜಾಗವನ್ನು ಹರಾಜುಮಾಡಿ ಬಂದ ಹಣವನ್ನು ಆಸ್ಪತ್ರೆ ಕಟ್ಟಡಕ್ಕಾಗಿ ಕೊಡಬೇಕೆಂದು 1949-50ರಲ್ಲಿ ಮುನಿಸಿಪಾಲಿಟಿಯವರು ತೀರ್ಮಾನಿಸಿದರೆಂದು ಹೇಳಿದೆ. ಆಸ್ಪತ್ರೆಯನ್ನು ಬಲ್ಲಿ ಕಟ್ಟಬೇಕೆಂದು ಮಾಡಿದೆ ?

ಶ್ರೀ ಟಿ. ಚನ್ನಯ್ಯ.—ಆಸ್ಪತ್ರೆ ಮುಂಭಾಗದಲ್ಲಿರುವ ಖಾಲಿ ಜಾಗವನ್ನು ಸ್ವೆಟುಗಳಾಗಿ ವಿಂಗಡಿಸಿ ಹರಾಜು ಮಾಡುವುದರಿಂದ ಉತ್ಪತ್ತಿಯಾಗಬಹುದೆಂದು ನಿರೀಕ್ಷಿಸಿರುವ 1,25,000 ರೂಪಾಯಿಗಳನ್ನು ಕಂಬೈಂಡ್ ಆಸ್ಪತ್ರೆ ಕಟ್ಟಲು ವಿನಿಯೋಗಿಸಬೇಕೆಂದೂ, ಸದರಿ ಖಾಲಿ ಜಾಗವನ್ನೂ ಹರಾಜು ಮಾಡಲು ಮಂಜೂರಾತಿ ಕೊಡುವ ಪೂರ್ವಭಾವಿಯಾಗಿ ಚಿಂತಾಮಣಿ ಮುನಿಸಿಪಲ್ ಕೌನ್ಸಿಲ್‌ರವರು 25,000 ರೂಪಾಯಿಗಳನ್ನು ಸರ್ಕಾರದಲ್ಲಿ ಡಿಪಾಜಿಟ್ಟು ಮಾಡತಕ್ಕುದೆಂದೂ ನಿರ್ಧರವಾಗಿದ್ದಿತು. ಅವರು ಹಣವನ್ನು ಡಿಪಾಜಿಟ್ಟು ಮಾಡಿಲ್ಲ. ಆದುದರಿಂದ ಸದರಿ ಖಾಲಿ ಜಾಗವನ್ನು ಹರಾಜುಮಾಡಲು ಮುನಿಸಿಪಲ್ ಕೌನ್ಸಿಲ್‌ರವರಿಗೆ ಅನುಮತಿ ಕೊಟ್ಟಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಡಿಪಾಜಿಟ್ ಕೊಟ್ಟರೇನೆ ಅನುಮತಿ ಕೊಡುವುದೇ ?

ಶ್ರೀ ಟಿ. ಚನ್ನಯ್ಯ.—ಮುನಿಸಿಪಲ್ ಕೌನ್ಸಿಲ್‌ನವರೂ ಈ ಪರತ್ತಿಗೆ ಒಪ್ಪಿದ್ದಾರೆ. 25,000 ರೂಪಾಯಿಗಳನ್ನು ಡಿಪಾಜಿಟ್ಟು ಮಾಡಿದನಂತರವೇ ಖಾಲಿ ಜಾಗ ಹರಾಜು ಮಾಡಲು ಅನುಮತಿ ಪಡೆಯುವುದಾಗಿ ಹೇಳಿದ್ದಾರೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಹೊಸದಾಗಿ ಆಸ್ಪತ್ರೆ ಕಟ್ಟುವುದು ಯಾವ ಜಾಗದಲ್ಲಿ ?

ಶ್ರೀ ಟಿ. ಚನ್ನಯ್ಯ.—ಈಗಿರುವ ಆಸ್ಪತ್ರೆಯ ಹಿಂಭಾಗದಲ್ಲಿ, ಪಕ್ಕದಲ್ಲೇ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಆಸ್ಪತ್ರೆಯ ಸುತ್ತಲೂ ಇರತಕ್ಕ ಜಾಗದಲ್ಲಿ ಅಂಗಡಿಗಳನ್ನು ಕಟ್ಟಿದರೆ ಆಸ್ಪತ್ರೆಯ ರೋಗಿಗಳಿಗೆ, ಗಾಳಿ, ಬೆಳಕು, ಇಲ್ಲದೆ ತೊಂದರೆಯಾಗುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದನ್ನೆಲ್ಲಾ ಆಲೋಚಿಸಿಯೇ ಮುನಿಸಿಪಲ್ ಕೌನ್ಸಿಲ್‌ನವರು ಕಂಬೈನ್ಡ್ ಡಿಸ್ಪೆನ್ಸರಿ ಕಟ್ಟಬೇಕೆಂದು ಮಾಡಿದ್ದಾರೆ. ಆದರೆ ಅವರಲ್ಲಿ ಸಾಕಷ್ಟು ಹಣವಿಲ್ಲ; ಈ ಸ್ವೆಟುಗಳನ್ನು ಪಾರಾಟ ಮಾಡಿದರೆ ಮಾತ್ರವೇ ಇದು ಸಾಧ್ಯವಾಗುತ್ತದೆಂದು ಹೇಳಿ ನಿರ್ಣಯ ಕಳುಹಿಸಿದ ಮೇಲೆ, ಈಗ ಅದು ಸರ್ಕಾರದ ಪರ್ಯಾಲೋಚನೆಗೆ ಬಂದಿದೆ

Sri MULKA GOVINDA REDDY.—Since how long the ownership of the land is in dispute ?

Sri T. CHANNIAH.—Since 1949.

Sri MULKA GOVINDA REDDY.—For the last three years the Government have not come to any decision ?

Sri T. CHANNIAH.—Because the Municipal Council have failed to credit a sum of Rs. 25,000 in the first instance as promised.

Sri MULKA GOVINDA REDDY.—My question is this. The ownership of the land is in dispute; why the Government have not decided the ownership of the land for such a long time ?

Sri T. CHANNIAH.—It is still under consideration.

Providing drinking wells in the Villages of Nelamangala Taluk.

Q.—678. Sri D. M. GOVINDARAJU (Nelamangala).—

Will the Government be pleased to state :—

(*a*) the number and names of villages in Nelamangala Taluk from which petitions have been received by them since the last five years praying for the construction of drinking wells ;

(*b*) out of them, for how many villages such wells are now provided ;

(*c*) the names of villages for which such drinking wells are not yet provided ; (details to be furnished for five years) ?

A.—Sri T. CHANNIAH (Minister for Public Health and Local Self-Government).—

(*a*) 74. List appended.

(*b*) 22.

(*c*) List appended. Out of these 52 cases, well works are under progress in 5 cases and estimates have been sanctioned in 20 cases.